ದಿಃ08.08.2023 OS No.53/2019 PW-4

ದಿಃ08.08.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಹೆಚ್.ಕೆ.ಜಿ ವಕೀಲರಿಂದ

ನನಗೆ ಪ್ರತಿವಾದಿಗಳು ಗೊತ್ತು. ನಾನು ವಾದಿಯ ಸ್ವಂತ ಅಣ್ಣನ ಮಗ ಎಂದರೆ ಸರಿ. ವಾದಿಯು ಹೇಳಿದ ಮೇರೆಗೆ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಪ್ರತಿವಾದಿಗಳು ತೊಂದರೆ ಕೊಡುವುದರಿಂದ ತಡೆಹಿಡಿಯಲು ಈ ದಾವೆ ಸಲ್ಲಿಸುವುದಾಗಿ ಹೇಳಿರುತ್ತಾರೆ. ಅದರ ಸರ್ವೆ ನಂ.148 ಆಗಿದ್ದು ಅದರ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ ಆಗಿರುತ್ತದೆ. 1997 ರಲ್ಲಿ ವಾದಿಗೆ 3 ಎಕರೆ 20 ಗುಂಟೆ ಮಂಜೂರು ಆಗಿರುತ್ತದೆ. ಪ್ರತಿವಾದಿಗಳಿಗೆ ಯಾವ ಸರ್ವೆ ನಂಬರ್ ನಲ್ಲಿ ಮಂಜೂರು ಆಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ರಾಗಿ ಮಾವು ಮತ್ತು ಹುರುಳಿಯನ್ನು ಬೆಳೆಯುತ್ತಿದ್ದಾರೆ.

ವಾದಿಗೆ ಸೇರಿದ ಕೆಲವು ವಿಸ್ತೀರ್ಣದ ಸ್ವತ್ತು ಭೂ-ಸ್ವಾಧೀನ ಆಗಿರುವ ಬಗ್ಗೆ ನನಗೆ ತಿಳಿದುಬಂದಿರುತ್ತದೆ. ವಾದಿಯು ಹೆಚ್ಚು ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಯಾವ ದಿಕ್ಕಿನಲ್ಲಿ ವಾದಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನಿಂದ ನಮ್ಮ ಸ್ವತ್ತಿಗೆ ಒಂದೂವರೆ ಯಿಂದ 2 ಕಿ.ಮೀ. ಅಂತರದಲ್ಲಿ ಇರುತ್ತದೆ. ಪ್ರತಿವಾದಿಗಳ ಸ್ವತ್ತು ಭೂಸ್ವಾಧೀನ ಆಗಿರುತ್ತದೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ನಾನು ವಾದಿಯ ದೊಡ್ಡಪ್ಪನ ಮಗನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 35 ಗುಂಟೆ ಭೂಸ್ವಾಧೀನಕ್ಕೆ ಸಂಬಂಧವಾಗಿ ಪರಿಹಾರ ಪಡೆಯುವುದು ವಿಳಂಬವಾಗಲೀ ಎಂದು ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.